ಒಂದು ವೇಳೆ ಯಾರಿಗಾದರೂ ಪ್ರೈವೇಟ್‌ನವರಿಗೆ ಆ ಭಾವಿಯನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಒಂದು ವೇಳೆ ಅವರು ವಾಲಂಟರಿಯಾಗಿ ಕೊಟ್ಟರೆ ಆ ಸ್ಕೀಮನ್ನು ಕಂಪ್ಲೀಟ್ ಮಾಡಿ ಕೊಡುತ್ತೇನೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ: 12 ಗ್ರಾಮಗಳಲ್ಲಿ ತೆಗೆದುಕೊಂಡಿರುವ ಯೋಜನೆ ಬಗ್ಗೆ ಮಾನ್ಯ ಸಚಿವರು ಹೇಳಿದರು. ಆದರೆ ನಾನು ಹೇಳುವುದು ಸಮಸ್ಯಾತ್ಮಕ ಗ್ರಾಮಗಳು. ಈಗಾಗಲೇ ನಾನು ವಿವರಿಸಿದ್ದೇನೆ. ಅಲ್ಲಿ ಎಲ್ಲಾ ಕೆಲಸಗಳು ಆಗಿದ್ದರೂ ಸಹ ಆ ಗ್ರಾಮಗಳಿಗೆ ನೀರು ಸರಬರಾಜು ಇಲ್ಲ ಏಕೆ?

ಶ್ರೀ ಕೆ.ಬಿ. ಕೋಳಿವಾಡ್: ಸಮಸ್ಯಾತ್ಮಕ ಗ್ರಾಮಗಳು ಇರತಕ್ಕದ್ದು ಆ ತಾಲ್ಲೂಕಿನಲ್ಲಿ 12 ಗ್ರಾಮಗಳು. 12 ಗ್ರಾಮಗಳ ಹೆಸರಗಳನ್ನೂ ಕೂಡ ನಾನು ಕೊಟ್ಟಿದ್ದೇನೆ. ಅದರಲ್ಲಿ 3 ಗ್ರಾಮಗಳಲ್ಲಿ ಯೋಜನೆ ಮುಗಿದಿದೆ. 9 ಗ್ರಾಮಗಳಲ್ಲಿ ಬೇರೆ ಬೇರೆ ಹಂತಗಳಲ್ಲಿದೆ. ಅದಕ್ಕೆ ಎಷ್ಟೇ ಹಣವಾದರೂ ನಾವು ಕಂಪ್ಲೀಟ್ ಮಾಡಿ ಕೊಡುತ್ತೇವೆ.

ಅಧ್ಯಕ್ಷರು: ಮಾಡುತ್ತಾರಂತೆ ಬಿಡಿ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ: ನಾನು ಹೇಳಿರುವ ಗ್ರಾಮಗಳಲ್ಲಿ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಅವರು ಹೇಳಿರತಕ್ಕಂಥದ್ದು ಬೇರೆ ಬೇರೆ ಹೊಸ ಹೊಸ ಗ್ರಾಮಗಳಲ್ಲಿ ಕಾರ್ಯಕ್ರಮ ಹಾಕಿಕೊಂಡಿರುವುದನ್ನು ಹೇಳಿದ್ದಾರೆ. ನಾನು ಹೇಳುತ್ತಿರುವುದು ಸಮಸ್ಯಾತ್ಮಕ ಗ್ರಾಮಗಳ ವಿಚಾರ. ಅದಕ್ಕಾಗಿ ಈ ಗ್ರಾಮಗಳಿಗಾಗಿ 20–30 ಲಕ್ಷ ರೂಪಾಯಿ ಖರ್ಚು ಮಾಡಿದರೂ ಸಹ ಅದಕ್ಕೆ ನೀರು ಸರಬರಾಜು ಇಲ್ಲ. ಅದಕ್ಕೆ ಆ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್: ಮಾನ್ಯ ಸಭಾಧ್ಯಕ್ಷರೆ, ಆ ಗ್ರಾಮಗಳ ಹೆಸರನ್ನು ಕೊಟ್ಟರೆ ಅಲ್ಲಿ ನೀರಿನ ಸಮಸ್ಯೆಯನ್ನು ಬಗೆ ಹರಿಸಿಕೊಡುತ್ತೇನೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ: ಮಾನ್ಯ ಮಂತ್ರಿಯವರಿಗೆ ಒಂದು ಪಟ್ಟಿಯನ್ನು ತಂದು ಕೊಡುತ್ತೇನೆ.

ಕೆ.ಸಿ. ರೆಡ್ಡಿಯವರ ಪುತ್ತಳಿಯನ್ನು ಬಾಗೇಪಲ್ಲಿ ಪಟ್ಟಣದಲ್ಲಿ ಹಾಗೂ ಬೆಂಗಳೂರಿನಲ್ಲಿ ಅನಾವರಣ ಮಾಡುವುದು

451 (4116) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಪ್ರಪಥಮ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರು ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ;

ಆ) ಇವರ ಪುತ್ತಳಿಯನ್ನು ಎಲ್ಲಿ ನಿರ್ಮಿಸಲಾಗಿದೆ; ಇಲ್ಲವಾದಲ್ಲಿ, ನಿರ್ಮಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ; ನಿರ್ಮಿಸುವುದು ಯಾವಾಗ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯವರು):

ಅ) ಬಂದಿರುತ್ತದೆ.

ಆ) ಜಿಲ್ಲಾಧಿಕಾರಿಗಳು, ಕೋಲಾರ ಇವರು ದಿವಂಗತ ಕೆ.ಸಿ. ರೆಡ್ಡಿಯವರ ಪ್ರತಿಮೆಯನ್ನು ಬಾಗೇಪಲ್ಲಿ ಪಟ್ಟಣದ ಗೋಳೂರು ವೃತ್ತದಲ್ಲಿ ನಿರ್ಮಿಸಲು ಜಿಲ್ಲಾ ಸಮಿತಿಯ ನಡೆವಳಿ, ಅಂದಾಜು ವೆಚ್ಚ, ನೀಲಿ ನಕ್ಷೆ ಮುಂತಾದವುಗಳೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಈ ಒಂದು ಉತ್ತರ ನನಗೆ ಸಮಾಧಾನ ಆಗಬಹುದು ಎಂದು ಅಂದುಕೊಂಡಿದ್ದಾರೆ. ಆದರೆ ಬಹಳ ನೋವಾಗುತ್ತಿದೆ. ಏಕೆಂದರೆ ತಾವುಗಳೂ ಕೂಡ ಕೆ.ಸಿ. ರೆಡ್ಡಿಯವರ ಶತಮಾನೋತ್ಸವ ಕಾರ್ಯಕ್ರಮವನ್ನು ಮಾಡಿದ್ದೀರಿ. ಆಗ ಸ್ವಲ್ಪ ಜನಕ್ಕೆ ಕೆ.ಸಿ. ರೆಡ್ಡಿಯವರ ಬಗ್ಗೆ ಗೊತ್ತಾಯಿತು. ಇವತ್ತು ನನ್ನ ಪ್ರಶ್ನೆ ಇಷ್ಟೆ. ರಾಜ್ಯದ ಪ್ರಪಥಮ ಮುಖ್ಯಮಂತ್ರಿಯಾಗಿದ್ದಂತಹ ಕೆ.ಸಿ. ರೆಡ್ಡಿಯವರು ಈ ವಿಧಾನ ಸೌಧದ ನಕ್ಷೆಯನ್ನು ಪ್ರಾರಂಭ ಮಾಡಿದವರು. ಮತ್ತು ಜವಾಹರ್ ಲಾಲ್ ನೆಹರೂ ಅವರನ್ನೂ ಕರೆದುಕೊಂಡು ಬಂದು ಶಂಕು ಸ್ಥಾಪನೆ ಮಾಡಿಸಿದವರು. ಇಂತಹವರ ಒಂದು ಪುತ್ಥಳಿಯನ್ನು ವಿಧಾನಸೌಧದ ಮುಂದೆ ನಿರ್ಮಾಣ ಮಾಡಲು ತಮ್ಮಲ್ಲಿ ಏನು ತೊಂದರೆ ಇದೆ ಎಂದು ಕೇಳುತ್ತಿದ್ದೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಕೆ.ಸಿ. ರೆಡ್ಡಿಯವರ ಭಾವನೆ ಬಗ್ಗೆ ಸರ್ಕಾರಕ್ಕೆ ಖಂಡಿತ ಗೌರವ ಇದೆ. ಅವರು ಕರ್ನಾಟಕ ರಾಜ್ಯದ ಮೊಟ್ಟ ಮೊದಲ ಮುಖ್ಯಮಂತ್ರಿಗಳು. ಅವರ ಪ್ರತಿಮೆಯನ್ನು ನಾವು ಈಗಾಗಲೇ ಎರಡನೇ ಉತ್ತರದಲ್ಲಿ ಕೊಟ್ಟಿರುವ ಹಾಗೆ ಜಿಲ್ಲಾಧಿಕಾರಿಗಳು, ಕೋಲಾರ, ಅಲ್ಲಿ ಸ್ಥಾಪನೆ ಮಾಡಬೇಕು ಎನ್ನುವ ಮನವಿಯನ್ನು ನಮ್ಮ ಇಲಾಖೆ ಮೂಲಕ ಸರ್ಕಾರ ಪರಿಶೀಲನೆ ಮಾಡಿತ್ತು. ಈಗ ಸದಸ್ಯರು ವಿಧಾನ ಸೌಧದ ಬಳಿ ಕೆ.ಸಿ. ರೆಡ್ಡಿಯವರ ಪ್ರತಿಮೆಯನ್ನು ಇಡಬೇಕು ಎನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಈ ಬಗ್ಗೆ ನಾವು ಪ್ರಸ್ತಾವನೆಯನ್ನೂ ಸರ್ಕಾರಕ್ಕೆ ಕಳುಹಿಸಿ ಕೊಡುತ್ತೇವೆ.

ಅಧ್ಯಕ್ಷರು: ನೀವು ಸರ್ಕಾರಕ್ಕೆ ಕಳುಹಿಸಿ ಕೊಡಿ.

ಶ್ರೀಮತಿ ರಾಣಿ ಸತೀಶ್: ಪ್ರಸ್ತಾವನೆಯನ್ನು ನಾನು ಕಳುಹಿಸಿ ಕೊಡುತ್ತೇನೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಮಂತ್ರಿಗಳು ಇಲ್ಲೇ ಇದ್ದಾರೆ. ಅದನ್ನು ಮಾಡುತ್ತೇವೆಂದು ಹೇಳಿ ಸರ್ಕಾರಕ್ಕೆ ಪ್ರಸ್ತಾವನೆ ಏಕೆ ಕಳುಹಿಸುವುದು? ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ಹೇಳಲಿ. ಪ್ರಪಥಮ ಮುಖ್ಯಮಂತ್ರಿ ಆಗಿದ್ದಂತಹ ಕೆ.ಸಿ. ರೆಡ್ಡಿಯವರುದ್ದು ಪುತ್ಥಳಿ ಮೊದಲು ಆಗಬೇಕಾಗಿತ್ತು. ನಿಜವಾಗಿ ಹೇಳಬೇಕು ಎಂದರೆ, ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಇರುವುದರಿಂದ ಅದನ್ನು ಸ್ಥಾಪಿಸುತ್ತೇವೆಂದು ಹೇಳಲಿ. ಅದೇನು ಬಹಳ ಖರ್ಚು ಬರುವುದಿಲ್ಲ. ಕೂಡಲೇ ಸ್ಥಾಪಿಸುತ್ತೇವೆಂದು ಹೇಳಲಿ.

ಶ್ರೀಮತಿ ರಾಣಿ ಸತೀಶ್: ಅವರು ಪ್ರಸ್ತಾವನೆಯನ್ನು ಕಳುಹಿಸಿ ಕೊಡಲಿ.

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಪಾಟೀಲ್ ಅವರೇ, ತಾವು ಹತ್ತಾರು ವರ್ಷಗಳಿಂದ ಈ ಸದನದಲ್ಲಿ ಇದ್ದೀರಿ. ತಮ್ಮ ಕೈಯಲ್ಲೂ ಅಧಿಕಾರ ಇತ್ತು. ಏಕೆ ಮಾಡಲಿಲ್ಲ

ಎಂದು ತಮ್ಮನ್ನು ಕೇಳುತ್ತೀರಿ, ನೀವೇಕೆ ಮಾಡಲಿಲ್ಲ? ನಾವು ಮಾಡುವಂತಹ ಭರವಸೆ ಕೊಡಬಹುದು, ಕೊಡುವಂತದ್ದು, ಮಾಡುವಂತಹ ಅವಕಾಶ ನಮಗೆ ಇದೆ. ತಾವು ಏಕೆ ಮಾಡಲಿಲ್ಲ ಎನ್ನುವ ಬಗ್ಗೆ ಕೇಳುತ್ತಿದ್ದೇನೆ. ತಾವು ಆದೇಶ ಕೊಟ್ಟು ಬಿಡುತ್ತೀರಿ, ನೀವೇಕೆ ಮಾಡಿಲ್ಲ ಎಂದು.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಹೇಗಿದೆ ಎಂದರೆ ಸ್ಪಷ್ಟವಾಗಿ ಹೇಳಿ ಬಿಡುತ್ತೇನೆ. ಯಾರಾದರೂ ಮುಖ್ಯಮಂತ್ರಿಗಳು ಆಗಿ ಹೋದ ಮೇಲೆ ಅವರ ಮಕ್ಕಳು ಏನಾದರೂ ಬಹಳ ದೊಡ್ಡವರಾದರೆ, ಅವರು ಬೆಳೆದುಕೊಂಡರೆ ಆ ಮುಖ್ಯಮಂತ್ರಿ ಹೆಸರು ಬರುತ್ತದೆ. ಅವರ ಹಿಂದೆ ಯಾರೂ ಇಲ್ಲದಿದ್ದರೆ ಯಾರೂ ಮಾತನಾಡಿಸುವುದಿಲ್ಲ. ಇದು ರಾಜಕೀಯ ಮಂದಿ ಪರಿಸ್ಥಿತಿ. ಅದು ಆಗುವುದು ಬೇಡ. ದಯವಿಟ್ಟು ಹಿಂದೆ ಮಾಡಿಲ್ಲ ಎಂದು ಹೇಳಿ, ನೀವು ಮಾಡಬೇಕಾದುದನ್ನು ಬಿಡಬೇಕು ಎಂದೇನಿಲ್ಲ. ನೀವು ಮಾಡಿ ಒಳ್ಳೆಯ ಹೆಸರು ಉಳಿಸಿಕೊಳ್ಳಿ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಸಗೀರ್ ಅಹಮದ್ ಅವರು ಕೇಳಿದಂತಹ ಉಪ ಪ್ರಶ್ನೆಗೆ ತಾವು ಉತ್ತರ ಕೊಡಲಿಲ್ಲ. ನೀವು ಐದು ವರ್ಷ ಅಧಿಕಾರದಲ್ಲಿ ಇದ್ದರಲ್ಲಾ, ಏಕೆ ಇಷ್ಟು ಧಾರಳತನ ನಿಮಗೆ ಬರಲಿಲ್ಲ ಎಂದು ಅಷ್ಟೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಮುಖ್ಯಮಂತ್ರಿಗಳು ಕೇಳುವಂತಹ ಪ್ರಶ್ನೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವು ಮಾಡದೇ ಇದ್ದರೆ ನೀವು ಮಾಡಬಾರದು ಎಂದೇನೂ ಇಲ್ಲ. ನಾವು ಮಾಡಿದ್ದೇವೆಂದು ಹೇಳಲಿಲ್ಲವಲ್ಲಾ. ನಾವು ಮಾಡಿಲ್ಲ ಎಂದು ಹೇಳಿದ ಹಾಗೆ ಆಯಿತಲ್ಲಾ. ನಾವು ಮಾಡದೇ ಇದ್ದರೆ ನೀವು ಮಾಡಬಾರದು ಎಂದೇನೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ದಯವಿಟ್ಟು ಮಾಡುತ್ತೇವೆಂದು ತಾವು ಉತ್ತರ ಹೇಳಿ ಬಿಟ್ಟರೆ, ಎಲ್ಲರಿಗೂ ಸಂತೋಷ ಆಗುತ್ತದೆ. ತಾವೇ ಉತ್ತರ ಹೇಳಬೇಕು, ಮಾನ್ಯ ಸಚಿವರು ಉತ್ತರ ಹೇಳುವುದು ಬೇಕಾಗಿಲ್ಲ ನಮಗೆ. ಕೂಡಲೇ ಅದನ್ನು ಮಾಡುತ್ತೇವೆಂದು ತಾವು ಹೇಳಿದರೆ ಇಡೀ ಸದನಕ್ಕೆ ಅಲ್ಲ, ಇಡೀ ರಾಜ್ಯಕ್ಕೆ ಸಂತೋಷವಾಗುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಈಗ ನಾವು ಬಿಜೆಪಿಯವರು ಹೇಳುತ್ತಿದ್ದೇವೆ. ದಯವಿಟ್ಟು ಮಾಡಿ.

ಶ್ರೀ ಎಸ್.ಎಸ್. ಪಾಟೀಲ್: ಬಿಜೆಪಿ ಪಾಜೇಪಿ ಏಕೆ ತರುತ್ತೀರಿ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ವಿಧಾನಸೌಧವನ್ನು ಕಟ್ಟುವಾಗ ಮಾನ್ಯ ಪ್ರಧಾನ ಮಂತ್ರಿಗಳು, ಮಹಾರಾಜರು ಹಾಗೂ ಕೆ.ಸಿ. ರೆಡ್ಡಿಯವರದ್ದು ಅನೇಕ ಚಿತ್ರಗಳು ಫೋಟೋಗ್ರಾಫ್‌ನಲ್ಲಿ ಬಂದಿದೆ. ಅವರು ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿದ್ದರು ಎನ್ನುವ ವಿಚಾರ ಬಂದಿದೆ. ಮಾನ್ಯ ಸಂಪಂಗಿಯವರು ಪ್ರಶ್ನೆ ಕೇಳಿದ್ದಾರೆ. ಜನತಾ ದಳದವರೇ ಮಾಡಬಹುದಾಗಿತ್ತು, ಆಗ ಪ್ರಶ್ನೆ ಬಂದಿರಲಿಲ್ಲ. ಈಗ ಮಾನ್ಯ ಸಂಪಂಗಿಯವರು ಪ್ರಶ್ನೆ ಕೇಳುತ್ತಿರುವುದು ಏನೆಂದರೆ ಯಾರ್ಯಾರದ್ದೋ ಮುಖ್ಯಮಂತ್ರಿಗಳದ್ದು ಪುತ್ಥಳಿ ಹಾಕುತ್ತಿದ್ದೀರಿ; ಸಂತೋಷ. ಕೆ.ಸಿ. ರೆಡ್ಡಿಯವರ ಪುತ್ಥಳಿಯನ್ನು ಇಡಬೇಕೆಂದು ಕೇಳುತ್ತಿದ್ದಾರೆ. ಅದರ ಜೊತೆಗೆ ನನ್ನ ಒಂದು ಸಲಹೆ ಇದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆ ಕೊಡುತ್ತೇನೆ. ನಮ್ಮ ಕಾನ್ಫರೆನ್ಸ್ ಹಾಲ್ ಇದೆ. ಬಿಗಿನಿಂಗ್‌ನಿಂದ ಎಲ್ಲಾ ಮುಖ್ಯ ಮಂತ್ರಿಗಳದ್ದು ಆ ಕಾನ್ಫರೆನ್ಸ್ ಹಾಲ್‌ನಲ್ಲಿ ಯಾವ್ಯಾವ ಪೀರಿಯಡ್‌ನಲ್ಲಿ ಇದ್ದರು ಎಂಬುದನ್ನು ನಮೂದಿಸಬೇಕು. ನಮ್ಮ ಮುಖ್ಯ ನ್ಯಾಯಾಧೀಶರ ಕೊಠಡಿಯಲ್ಲಿ ಎಲ್ಲಾ ಮುಖ್ಯ ನ್ಯಾಯಾಧೀಶರ ಫೋಟ್ರೈಟ್ ಹಾಕಿದ್ದಾರೆ. ಅದೇ ರೀತಿ ಇಲ್ಲಿ ಕೂಡ ಕಾನ್ಫರೆನ್ಸ್ ಹಾಲ್‌ನಲ್ಲಿ

ಮಾಡಬಹುದು. ಕಲ್ಕತ್ತಾದ ಲಿಜಿಸ್ಲೇಚರ್ ಹೋಮ್‌ನಲ್ಲಿ ಕಮಿಟಿಯ ಹಾಲ್‌ನಲ್ಲಿ ಎಲ್ಲಾ ಮುಖ್ಯಮಂತ್ರಿಗಳು ಪೋಟ್ರೈಟ್ ಅನ್ನು ಅನ್‌ವೈಲ್ ಮಾಡಿದ್ದಾರೆ. ಅದೇ ರೀತಿ ಮೂರನೆಯ ಮಹಡಿಯಲ್ಲಿರುವ ಸಮ್ಮೇಳನ ಕೊಠಡಿಯಲ್ಲಿ ಎಲ್ಲಾ ಮುಖ್ಯಮಂತ್ರಿಗಳ ಭಾವ ಚಿತ್ರವನ್ನು ಅನಾವರಣ ಮಾಡಬೇಕಾಗಿದೆ. ಕೆ.ಸಿ. ರೆಡ್ಡಿಯವರಿಂದ ಪ್ರಾರಂಭಿಸಿ ಎಲ್ಲಾ ಮುಖ್ಯಮಂತ್ರಿಗಳ ಭಾವ ಚಿತ್ರವನ್ನು ಹಾಕಬೇಕು ಎಂಬುದು ನನ್ನ ಮನವಿ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಗಮನಿಸಿ ಹೆಚ್ಚಿನ ರೀತಿಯಲ್ಲಿ ಪ್ರಯತ್ನಿಸಬೇಕು. ಈ ಸ್ಟ್ಯಾಚುಗಳಿಗಿಂತ ಇದು ಬಹಳ ಮುಖ್ಯವಾದುದು. ಏಕೆಂದರೆ ಯಾರು ಬಿಗಿನಿಂಗ್ ಬಂದಿದ್ದರು ಎಂಬ ಬಗ್ಗೆ ಸ್ಟ್ಯಾಚುಗಿಂತ ಭಾವ ಚಿತ್ರ ಒಳ್ಳೆಯದು. ವಿಧಾನಸೌಧದ ಸುತ್ತಲೂ ಬೇಕಾದಷ್ಟು ಸ್ಟ್ಯಾಚುಗಳು ಆಗಬಾರದು ಎಂದು ನನಗೇನೋ ಅನಿಸುತ್ತದೆ. ಏಕೆಂದರೆ ಎಲ್ಲಾವನ್ನೂ ಹಾಕುವುದಾದರೆ ಮೊದಲಿನಿಂದ ಕೆ.ಸಿ. ರೆಡ್ಡಿಯವರ ಕಾಲದಿಂದ ಎಲ್ಲರ ಪುತ್ಥಳಿ ಮಾಡಿ ಬಿಡಿ.

ಅಧ್ಯಕ್ಷರು: ಆ ವಿಚಾರ ಸರ್ಕಾರಕ್ಕೆ ಬಿಡಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಪುತ್ಥಳಿಗಳು ಬೇಕಾಗಿಲ್ಲ. ಅದರ ಬದಲು ಕಾನ್ಫರೆನ್ಸ್ ಹಾಲ್‌ನಲ್ಲಿ ಒಳ್ಳೆಯ ಪೋಟ್ರೈಟ್ಸ್ ಹಾಕಿ. ನಾನು ಚೆನ್ನೈಯಲ್ಲಿ ನೋಡಿದ್ದೇನೆ, ಆಂಧ್ರ ಪ್ರದೇಶದಲ್ಲಿ ಯಾರ್ಯಾರು ಮುಖ್ಯಮಂತ್ರಿಗಳು ಇದ್ದರು ಎಂಬ ಪೋಟ್ರೈಟ್ ಇದೆ. ಟೈಮ್ ಪೀರಿಯಡ್ ಎಲ್ಲಾ ಇದೆ. ಆ ರೀತಿ ಮಾಡಿದರೆ ಬಹಳ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀಮತಿ ರಾಣಿ ಸತೀಶ್: ಖಂಡಿತ ಮಾನ್ಯ ಸದಸ್ಯರುಗಳು ಹೇಳಿದಂತಹ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಂಡು ನಾವು ಅದರ ಪ್ರಕಾರ ಮಾಡುವಂತಹ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಒಟ್ಟಾರೆ ವಿಷಯ ಕನ್‌ಫ್ಯೂಷನ್ ಮಾಡುವುದು ಬೇಡಿ. ಸರ್ಕಾರಕ್ಕೆ ನೀವು ಪ್ರಸ್ತಾವನೆ ಕಳುಹಿಸಿ ಅಷ್ಟೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ನನಗೆ ಒಂದು ವಿಚಾರ ಅರ್ಥ ಆಗಲಿಲ್ಲ. ಸರ್ಕಾರಕ್ಕೆ ಅಂದರೆ ಯಾವ ಸರ್ಕಾರಕ್ಕೆ? ಮಂತ್ರಿಗಳು ಇದ್ದಾರಲ್ಲಾ;

ಅಧ್ಯಕ್ಷರು: ಅವೆಲ್ಲಾ ವಿಚಾರ ಕ್ಯಾಬಿನೆಟ್‌ಗೆ ಹೋಗಬೇಕಲ್ಲಾ. ಅವರೊಬ್ಬರೇ ಆ ವಿಚಾರ ನಿರ್ಣಯ ಮಾಡುವುದಕ್ಕೆ ಆಗುತ್ತದಾ? ಸರ್ಕಾರಕ್ಕೆ ಅಂದರೆ ಕ್ಯಾಬಿನೆಟ್ ಮುಂದೆ ಹೋಗಲಿ ಎಂದು ಹೇಳುತ್ತಿದ್ದೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಸಭಾಧ್ಯಕ್ಷರೆ, ಪ್ರಸ್ತಾವನೆಗಳನ್ನು ಕಳುಹಿಸಿದ ನಂತರ ನಾನು ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ, ಕ್ಯಾಬಿನೆಟ್‌ಗೆ ಕಳುಹಿಸುವಂತಹ ಕೆಲಸ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲದೇ ಇದ್ದರೆ ಅವರನ್ನು ನಾನು ಪ್ರೆಸ್ ಮಾಡುತ್ತಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇರುವುದರಿಂದ ಅವರು ಮಾಡತಕ್ಕಂಥ ಕೆಲಸ. ದಯವಿಟ್ಟು ಅವರೇ ಉತ್ತರ ಕೊಡಬೇಕು. ದಯವಿಟ್ಟು ಏನು ಮಾಡುತ್ತೇವೆಂದು ಅವರೇ ಎದ್ದು ಉತ್ತರ ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ವಿಧಾನ ಸೌಧದ ಸುತ್ತಮುತ್ತ ಬಹಳ ಹೆಚ್ಚಿನ ಪ್ರಮಾಣದಲ್ಲಿ ಈಗ ಸ್ಟ್ಯಾಚುಗಳು ಉಂಟಾಗಿವೆ. ಈ ಬೆಳವಣಿಗ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಮಾಡಿದ್ದಾರೆ. ಆದರೆ ಮಾನ್ಯ ಬಸವನಗುಡಿಯ ಸದಸ್ಯರು ಏನು ಸಲಹೆ

ಮಾಡಿದ್ದಾರೆ, ಸ್ವೀಕಾರಾರ್ಹ ಆಗಬಲ್ಲ ಒಂದು ಸಲಹೆ ಅದು. ಅಂದರೆ ನಮ್ಮ ಬ್ಯಾಂಕ್ವೆಟ್ ಹಾಲ್ ಇದೆ. ಆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಇದರ ಬಗ್ಗೆ ಚಿಂತನೆ ನಡೆಸಿ ಇವುಗಳನ್ನು ಹೇಗೆ ಅದಕ್ಕೆ ಜೋಡಿಸಬಹುದು ಎನ್ನತಕ್ಕದ್ದನ್ನು ನಾನು ಖಂಡಿತಾ ನೋಡುತ್ತೇನೆ.

ರಾಜ್ಯದಲ್ಲಿ ಮಧುಮೇಹ (ಸಕ್ಕರೆ ಕಾಯಿಲೆ) ನಿಯಂತ್ರಣ

452 (3850) ಶ್ರೀ ಹೊನ್ನಪ್ಪಳ್ಳಿ ಜಬ್ಬಾರ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಧುಮೇಹ (ಸಕ್ಕರೆ ಖಾಯಿಲೆ) ಇರುವವರ ಸಂಖ್ಯೆ ಎಷ್ಟು? ಜಿಲ್ಲಾವಾರು ಮಾಹಿತಿ ನೀಡುವುದು;

ಆ) ಮಧುಮೇಹ (ಸಕ್ಕರೆ ಖಾಯಿಲೆ) ರೋಗ ನಿಯಂತ್ರಣಕ್ಕೆ ಸರ್ಕಾರ ಮುಂಜಾಗ್ರತ ಕ್ರಮಗಳೇನು; ಜಿಲ್ಲಾವಾರು ಸಮಿತಿಗಳು ರಚಿಸಲಾಗಿದೆಯೇ;

ಇ) ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಈ ರೋಗ ನಿಯಂತ್ರಣಕ್ಕಾಗಿ ಬಂದ ಅನುದಾನ ಎಷ್ಟು; 2002-03 ಮತ್ತು 2003-04ನೇ ಸಾಲಿನ ವಿವರ ನೀಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಈ ಮಧುಮೇಹ ರೋಗದ ಬಗ್ಗೆ ಯಾವ ರಾಷ್ಟ್ರೀಯ ಸಮೀಕ್ಷೆ ಮಾಡಿರುವ ದಾಖಲೆಗಳು ಇಲ್ಲ.

ತಜ್ಞರ ಅಧ್ಯಯನದ ವರದಿ ಪ್ರಕಾರ ರಾಜ್ಯದ ಮತ್ತು ನಗರದ ಜನರಲ್ಲಿ ಶೇ. 7.5 ಗ್ರಾಮೀಣ ಜನರಲ್ಲಿ ಶೇ. 12.4 ಮಧುಮೇಹ ರೋಗ ಇರುವುದಾಗಿ ಅಂದಾಜು ಮಾಡಲಾಗಿದೆ.

ಆ) ಮಧುಮೇಹ ರೋಗಕ್ಕೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಾದ ಜಿಲ್ಲಾ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂತ್ರ ಪರೀಕ್ಷೆಯ ವ್ಯವಸ್ಥೆ ಮಾಡಲಾಗಿದೆ ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಮಧುಮೇಹಕ್ಕೆ ರಕ್ತ ಪರೀಕ್ಷೆ ಮಾಡುವ ವ್ಯವಸ್ಥೆ ಇರುತ್ತದೆ. ಮಧುಮೇಹ ಕಂಡು ಬಂದವರಿಗೆ ಚಿಕಿತ್ಸೆಗೆ ಒಳಪಡಿಸಲಾಗುವುದು. 2002-2003 ರಲ್ಲಿ ಸರ್ಕಾರಿ ಔಷಧಿ ಮಳಿಗೆಯಿಂದ ಒಟ್ಟು 12,47,129 ರೂ.ಗಳು ಮತ್ತು ಏಪ್ರಿಲ್ 2003 ರಿಂದ ಇದುವರೆಗೆ 4,83,801ರೂ.ಗಳ ಔಷಧಿಗಳನ್ನು ಸರಬರಾಜು ಮಾಡಲಾಗಿದೆ. ಸಮಿತಿ ರಚಿಸುವ ಕ್ರಮ ಸದ್ಯಕ್ಕೆ ಇರುವುದಿಲ್ಲ.

ಇ) 2002-2003 ಮತ್ತು 2003-2004ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ಅನುದಾನ ಬಂದಿರುವುದಿಲ್ಲ.

11.40 ಎ.ಎಂ.

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇವೊತ್ತಿನ ವೈದ್ಯಕೀಯ ಮಾಹಿತಿ ಪ್ರಕಾರ ವಿಶೇಷವಾಗಿ ಸಕ್ಕರೆ ಖಾಯಿಲೆ ನಮ್ಮ ದೇಶದ ಜನರಿಗೆ ಹೆಚ್ಚಿಗೆ ಬರುತ್ತಿದೆ. ಇದಕ್ಕೆ ಕಾರಣವೇನು? ಸಕ್ಕರೆ ಕಾಯಿಲೆಯನ್ನು ತಡೆಗಟ್ಟಲು ಯಾವ ಉಪಾಯ ಕಂಡುಹಿಡಿಯಲಾಗಿದೆ ಎಂಬುದಕ್ಕೆ ಉತ್ತರಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಸಾಮಾನ್ಯವಾಗಿ ಊಟ ಮಾಡುವಾಗ ತುಪ್ಪ ಜಾಸ್ತಿ ಉಪಯೋಗಿಸುವವರಲ್ಲಿ ಈ ಸಕ್ಕರೆ ಖಾಯಿಲೆ ಕಂಡು ಬರುತ್ತದೆ. ಈ ಕಾಯಿಲೆ ತಡೆಗಟ್ಟಬೇಕಾದರೆ ಕಸರತ್ತು ಮಾಡಿದರೆ ಕಡಿಮೆಯಾಗುತ್ತದೆ.